## ಜಿಲ್ಲಾಧಿಕಾರಿಗಳವರ ಕಾರ್ಯಾಲಯ,ಹಾವೇರಿ ಜಿಲ್ಲೆ,ಹಾವೇರಿ

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013 ರ (ದಿನಾಂಕ 01-01-2014 ರಿಂದ ಜಾರಿಗೆ ತಂದ ಅಧಿಸೂಚನೆ ಪ್ರಕಾರ) ರೊಂದಿಗೆ ಓದಲಾದ ಕಲಂ 11(1) ರನ್ವಯ ಅಧಿಸೂಚನೆ.

ಕ್ರಸಂ: DC-HAV-15022(ii)/109/2016-HAV-LAQ-HAVERI-DC. ದಿನಾಂಕ: 02/09/2016.

ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿದ ಜಮೀನುಗಳು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ತುಂಗಾ ಮೇಲ್ದಂಡೆ ಯೋಜನೆ ಕಾಲುವೆಯ ನಿರ್ಮಾಣ ಕುರಿತು ಭೂಸ್ವಾಧೀನ (ನೀರಾವರಿ ಯೋಜನೆಗಾಗಿ) ಬೇಕಾಗುವದೆಂದು ಜಿಲ್ಲಾಧಿಕಾರಿಗಳು, ಹಾವೇರಿ ಇವರಿಗೆ ಕಂಡು ಬಂದಿದೆ. ಈ ಮೂಲಕ ತಿಳಿಸುವುದೇನೆಂದರೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013 ರ (ದಿನಾಂಕ 01-01-2014 ರಿಂದ ಜಾರಿಗೆ ತಂದ ಅಧಿಸೂಚನೆ ಪ್ರಕಾರ) ಕರ್ನಾಟಕ ಸರಕಾರದ ಆದೇಶ ಸಂ: ಕಂಇ/18ಅರ್ ಇ ಎಚ್/2014 ದಿನಾಂಕ 06-02-2014 ರಂತೆ ಹೊಸ ಕಾಯ್ದೆ 2013 ರ ಕಲಂ 11 ರ ಸೌಲಭ್ಯದ ಮೇರೆಗೆ (2013 ಕೇಂದ್ರದ 30 ನೇ ಕಾಯ್ದೆ) ಸದರ ಕಾನೂನಿನ ಕಲಂ 12 ರ ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ಜಿಲ್ಲಾಧಿಕಾರಿಗಳು ಹಾವೇರಿ ರವರು ಈ ಮೂಲಕ ಕಾರ್ಯಪಾಲನೆ ಪ್ರಾಧಿಕಾರವನ್ನು ವಿಶೇಷ ಭೂಸ್ವಾಧೀನ ಅಧಿಕಾರಿಗಳು, ತುಂಗಾ ಮೇಲ್ದಂಡೆ ಯೋಜನೆ ರಾಣೇಬೆನ್ನೂರು ಇವರಿಗೆ ನೀಡಲಾಗಿದೆ ಹಾಗೂ ಕಲಂ 43 ರ ಮೇರೆಗೆ ಭೂಸ್ವಾಧೀನ ಅಧಿಕೃತ ಪ್ರಾಧಿಕಾರದ ಕಾರ್ಯಪಾಲನೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು ಇವರಿಗೆ ನೀಡಲಾಗಿದೆ. ಸರ್ಕಾರದ ಆದೇಶ ಸಂ: ಕಂಇ/36/ಭೂಸ್ವಾವಿ/2014 ದಿನಾಂಕ 13-3-2014 ರನ್ವಯ ಮತ್ತು ತಿದ್ದುಪಡಿ ಆದೇಶ ದಿನಾಂಕ : 22-4-2014 ರನ್ವಯ ಕಲಂ 6(2) ಅಡಿಯಲ್ಲಿ ನೀರಾವರಿ ಯೋಜನೆಗಳಿಗಾಗಿ ಭೂಸ್ವಾಧೀನಪಡಿಸುವಾಗ ಪರಿಸರದ ಮೇಲಿನ ಪರಿಣಾಮ ನಿರ್ಧರಣದ ಅಂಶ (Environmental Impact Assessment) ಪ್ರಕ್ರಿಯೆಯನ್ನು ಬೇರಾವದೇ ಕಾಯ್ದೆಗಳಡಿಯಲ್ಲಿ ಮಾಡಬೇಕಾದಲ್ಲಿ ಸಾಮಾಜಿಕ ನಿರ್ಧರಣದ ಅಂಶ (Social Impact Assessment) ತುಂಗಾ ಮೇಲ್ದಂಡೆ ಯೋಜನೆಗೆ ಅನ್ವಯಿಸುವುದಿಲ್ಲವೆಂದು ಸ್ಪಷ್ಟೀಕರಿಸಿದೆ 2013 ಕಾಯ್ದೆ ಕಲಂ 15(1) ರ ಮೇರೆಗೆ ಆಸಕ್ತಿವುಳ್ಳವರು ತಮ್ಮ ತಂಟೆ ತಕರಾರುಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನದೊಳಗಾಗಿ ಈ ಕಾರ್ಯಾಲಯಕ್ಕೆ ಅರ್ಜಿ ಸಲ್ಲಿಸಬೇಕು ನಂತರ ಬಂದ ಅರ್ಜಿಗಳನ್ನು ಯಾವುದೇ ಮುನ್ಸುಚನೆ ನೀಡದೆ ವಿಲೆಯಕ್ಕೆ ಹಾಕಲಾಗುವುದು. ಈ ಜಮೀನು ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರಕಾರದಿಂದ ನೇಮಿಸಲ್ಪಟ್ಟ ಮೋಜಣಿದಾರರಾಗಲಿ ಅಥವಾ ಈ ಕೆಲಸ ಮಾಡುವವರಿಗೆ ಯಾರು ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013 ರ ಕಾಯ್ದೆ ಕಲಂ 11(4) ರ ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ ಭೋಗ್ಯಕ್ಕೆ ಅಡವಿಡುವ, ಅನುಭವಿಸುವ, ಬದಲಾಯಿಸುವ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ನಿರ್ಬಂದಿಸಿದೆ ಅಂತಹ ಯಾವದೆ ಕ್ರಯ ಅಥವಾ ಇನ್ನಾವುದೆ ರೀತಿಯ ಅಭಿವೃದ್ದಿ ಕಾರ್ಯಗಳನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೆ ಅಂತಿಮವಾಗಿ ಸದರಿ ಕಾಯ್ದೆ ಅನ್ವಯ ಭೂಸ್ವಾಧೀನಪಡಿಸಿಕೊಳ್ಳಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

### ಅನುಸೂಚಿ

ಜಿಲ್ಲೆ : ಹಾವೇರಿ ತಾಲೂಕ : ಹಿರೇಕರೂರು ಹೋಬಳಿ : ಹಿರೇಕೆರೂರು ಗ್ರಾಮ : ಮಾವಿನತೋಪು

| ಅ. ನಂ | ಖಾತೆದಾರರ ಹೆಸರು | ಅನುಭವದಾರರ ಹೆಸರು ಮತ್ತು ಋಣಭಾರ ಹಿಸ್ಸಾ | ಜಮೀನಿನ ಸ್ವಾಧೀನತೆ | | ವಿಸ್ತೀರ್ಣ | ಆಕಾರ | ಚಕ್ಕಬಂದಿ | | | |
|---|---|---|---|---|---|---|---|---|---|---|
| | | | ರಿ.ಸ.ನಂ. ಹಿಸ್ಸಾ ನಂ. | ಮಣ್ಣಿನ ನಮೂನೆ | | | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ |
| 1 | 2 | 3 | 4 | 5 | 6 | 7 | 8 | 9 | 10 | 11 |
| 1 | ಚಿಕ್ಕೋಳ ಬಸವಣ್ಣೆಪ್ಪ ತಂದೆ ಕಾಡಪ್ಪ 3-17 | – | 30/4ಅ+4ಬ ಅರ್ ಟಿ ಸಿ ಯಂತೆ 4ಅ | ಖುಷ್ಕಿ | 0–26 | 1–16 | ಗ್ರಾಮಗಡಿ | 30/4ಅ+4ಬ | 30/2 | ರಸ್ತೆ |

| 1 | 2 | 3 | 4 | 5 | 6 | 7 | 8 | 9 | 10 | 11 |
|---|---|---|---|---|---|---|---|---|---|---|
| 2 | 1) ಅ) ಚಿಕ್ಕೋಳ ಮಂಜಪ್ಪ<br>ಆ)ಬಸವ್ವ ತಂದೆ ಈರಪ್ಪ 4–04<br>ಇ) ಶಾಂತವ್ವ ಕೋಂ ಈರಪ್ಪ<br>2)ಕೋಣಿಮನೆ ಮಹದೇವನಗೌಡ<br>ಬಸನಗೌಡ 4–00<br>3) ಬತ್ತಿಕೊಪ್ಪದ ಭರಮಪ್ಪ ಬಿನ್<br>ನಿಂಗಪ್ಪ 4–00 | ವಿ.ಎಸ್.ಎಸ್.<br>ಬ್ಯಾಂಕ<br>ಬಿಲ್ಲಳ್ಳಿ<br>ಎಸ್.ಬಿ.ಐ.<br>ರಟ್ಟೀಹಳ್ಳಿ<br>– | 31/1<br>ಅರ್.ಟಿ.ಸಿ<br>ಯಂತೆ 1+2ಅ<br>1+2ಬ<br>1+2ಕ | ಖುಷ್ಕಿ | 0–32<br>0–22<br>0–22 | 1–24<br>0–85<br>0–85 | ದಂಡಗಿಹಳ್ಳಿ ಗ್ರಾಮಗಡಿ<br>ಗ್ರಾಮಗಡಿ<br>ಗ್ರಾಮಗಡಿ | 31/1<br>31/1<br>31/1 | 31/1<br>31/1<br>ರಸ್ತೆ | 31/2<br>31/1<br>31/1 |
| 3 | ಬನ್ನಿಕೋಡ ಬಸನಗೌಡ<br>ಹನುಮಂತಪ್ಪ 4–00 | – | 44/1+2ಅ/1 | ಖುಷ್ಕಿ | 0–13 | 0–46 | 44/2ಬ/1 | 44/1+2ಅ/1 | ರಸ್ತೆ | 44/1+2<br>ಅ/5 |
| 4 | ಬನ್ನಿಕೋಡ ಬಸಪ್ಪ ತಂದೆ<br>ಹನುಮಂತಪ್ಪ 2–00 | – | 44/1+2ಅ/5 | ಖುಷ್ಕಿ | 0–27 | 0–96 | 44/2ಬ/1 | 44/1+2ಅ/5 | 44/1+2ಅ/1 | 45 |
| | | | ಒಟ್ಟು | | 3-22 | | | | | |

(ದಿನೇಶಕುಮಾರ್. ಜಿ.ಟಿ.)
ವಿಶೇಷ ಭೂಸ್ವಾಧೀನಾಧಿಕಾರಿಗಳು

P.R.NO - 779

ಜಿಲ್ಲಾಧಿಕಾರಿಗಳು, ಹಾವೇರಿ.